ಆರು ವರ್ಷಕ್ಕೆ ಹಿರಿಯರಾದ ಪತ್ನಿ ಅಂಜಲಿ, ಮಗಳು ಸಾರಾ ಹಾಗೂ ಎದೆ ಯೆತ್ತರಕ್ಕೆ ಬೆಳೆದ ಮಗ ಅರ್ಜುನ್ ಅವರನ್ನು ಒಳಗೊಂಡ ಸಂತೃಪ್ತ ಕುಟುಂಬ ಸಚಿನ್‌ರದ್ದು. ಮರಿಮೊಮ್ಮಕ್ಕಳು ಕುಳಿತು ತಿಂದರೂ ಕರಗದಷ್ಟು ಆಸ್ತಿಯನ್ನು ಈ ಕುಟುಂಬ ಹೊಂದಿದೆ. ಸಚಿನ್‌ಗೆ ಕೊರತೆ ಇರುವುದೆಂದರೆ ಅದು ಇನ್ನೊಂದು ಶತಕ ಮಾತ್ರ. ಆ ಕನಸಿನ ಸಾಧನೆ ಕೈಗೂಡಿದಾಗ ಈ ಆಟಗಾರ ನಿವೃತ್ತಿ ಘೋಷಿಸಲಿದ್ದಾರೆಯೇ? ಗೊತ್ತಿಲ್ಲ! ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೂ ಈ ಪ್ರಶ್ನೆಗೆ ಸ್ಪಷ್ಟ ಉತ್ತರ ತಿಳಿದಿಲ್ಲ. ಕ್ರಿಕೆಟ್ 'ದೇವರ' ಆಟ ಬಲ್ಲವರಾರು?

## ನಿವೃತ್ತಿ ಬೇಡ ಎನ್ನುವವರು..

- ಕಳೆದ 22 ವರ್ಷಗಳಿಂದ ಕ್ರಿಕೆಟ್ ಆಡಿದರೆ ಏನಾಯಿತು? ತೋಳಿನಲ್ಲಿ ಇನ್ನೂ ಸಾಮರ್ಥ್ಯ ಇದೆ. ಉತ್ತಮವಾಗಿ ಬ್ಯಾಟ್ ಬೀಸಬಲ್ಲ ಕಲಾತ್ಮಕತೆ ಸಿದ್ಧಿಸಿದೆ. ಇನ್ನಷ್ಟು ಕಾಲ ಆಡಿದರೆ ತಪ್ಪೇನು? ಮೇಲಾಗಿ ಸಚಿನ್ ಅವರನ್ನು ಸಮರ್ಥವಾಗಿ ತುಂಬಬಲ್ಲ ಬೇರೆ ಆಟಗಾರರು ಯಾರಿದ್ದಾರೆ?
- ಕ್ರಿಕೆಟ್ ಒಂದು ತಂಡ ಆಟವೇನೋ ನಿಜ. ಸಾಂಘಿಕ ಯಶಸ್ಸಿಗೆ ಅಲ್ಲಿ ವೈಯಕ್ತಿಕ ಸಾಧನೆಯೂ ಮುಖ್ಯವಾಗುತ್ತದೆ. ದೇಶದ ಈ ಮಹಾನ್ ಆಟಗಾರ ಎಲ್ಲ ದಾಖಲೆಗಳನ್ನು ಮೀರಿ ನಿಂತಿದ್ದಾರೆ. ಅವರ ಇನ್ನೊಂದು ಶತಕ ತಂಡದ ಯಶಸ್ಸಿಗೂ ಕಾರಣವಾಗಿ, ಅವರ ವೈಯಕ್ತಿಕ ವಿಕ್ರಮವನ್ನೂ ಸಾಧಿಸುವುದಾದರೆ ಇನ್ನಷ್ಟು ಅವಕಾಶ ಕೊಡುವಲ್ಲಿ ತಪ್ಪೇನಿಲ್ಲ.
- ವಿಶ್ವಕಪ್ ಜಯಿಸಿದಾಗಲೇ ಸಚಿನ್ ಏಕೆ ನಿವೃತ್ತಿ ಹೇಳಬೇಕು? ಶತಕದ ನೂರಿಗೆ ಇನ್ನೊಂದೇ ಶತಕ ಬೇಕಾದಾಗ ವಿದಾಯ ಹೇಳಿ ಎನ್ನುವುದು ಕುಹಕವಲ್ಲವೆ?
- ಆಟಗಾರ ಎಂದ ಮೇಲೆ ಏರಿಳಿತಗಳು ಇದ್ದೇ ಇರುತ್ತವೆ. ಹಾಗಂತ ಎಲ್ಲ ಆಟಗಾರರನ್ನೂ ತಂಡದಿಂದ ಹೊರಗೆ ಹಾಕಲು ಆಗುತ್ತದೆಯೇ? ಶತಕ ಗಳಿಸಿಲ್ಲ ಎನ್ನುವುದನ್ನು ಬಿಟ್ಟರೆ ಸಚಿನ್ ಚೆನ್ನಾಗಿಯೇ ಆಡಿದ್ದಾರೆ.
- ವಯಸ್ಸಾದರೂ ಅವರ ತೋಳಿನಲ್ಲಿ ಇನ್ನೂ ಶಕ್ತಿ ಇದೆ. 'ನನಗೆ ಇನ್ನುಮುಂದೆ ಆಡಲು ಆಗದು' ಎಂಬ ಅಭಿಪ್ರಾಯಕ್ಕೆ ಬಂದರೆ ಸಚಿನ್ ತಾವೇ ನಿವೃತ್ತಿ ಹೇಳುತ್ತಾರೆ. ಆಡುತ್ತಲೇ ಅವರು ಸಮಾಜ ಸೇವೆ ಮಾಡುತ್ತಿದ್ದಾರೆ. ಒಬ್ಬ ಆಟಗಾರನ ಮೇಲೆ ಇಷ್ಟೆಲ್ಲ ಒತ್ತಡ ಹೇರುವುದು ತರವಲ್ಲ. ಈಗಾಗಲೇ ನಿವೃತ್ತಿಯಾದ ಆಟಗಾರರು ದೇಶಕ್ಕಾಗಿ ಏನೇನು ಮಾಡಿದ್ದಾರೆ?

## ನಿವೃತ್ತಿ ಆಗಲಿ ಎನ್ನುವವರು..

- ಸತತ 22 ವರ್ಷಗಳಿಂದ ಅಂತರರಾಷ್ಟ್ರೀಯ ಕ್ರಿಕೆಟ್ ಆಡಿದ್ದಾರೆ. ಈಗ 40ರ ಹೊಸ್ತಿಲಲ್ಲಿ ಇದ್ದಾರೆ. ಎಂದಾದರೂ ಒಂದು ದಿನ ನಿವೃತ್ತಿ ಆಗಲೇಬೇಕು. ಈಗಲೇ ಗುಡ್‌ಬೈ ಹೇಳಿ ಹೊಸಬರಿಗೆ ಅವಕಾಶ ಮಾಡಿಕೊಡಬೇಕು. ಹೊಸ ಪ್ರತಿಭೆಗಳಿಗೆ ಹಳಬರಿಂದ ಅನ್ಯಾಯ ಆಗಬಾರದು.
- ಕ್ರಿಕೆಟ್ ಒಂದು ತಂಡ ಆಟ. ತಂಡದ ಯಶಸ್ಸಿಗೆ ವೈಯಕ್ತಿಕ ದಾಖಲೆಗಳು ಪೂರಕವಾಗಿರಬೇಕೇ ವಿನಃ ವೈಯಕ್ತಿಕ ದಾಖಲೆಗಳಿಗೇ ಆಡುವುದಲ್ಲ. ವೆಸ್ಟ್ ಇಂಡೀಸ್ ತಂಡದ ಬ್ರಯಾನ್ ಲಾರಾ ಸರಿಯಾದ ಸಮಯಕ್ಕೆ ನಿವೃತ್ತಿ ಘೋಷಿಸಿ ಮೇಲ್ಪಂಕ್ತಿ ಹಾಕಿದ್ದಾರೆ. ಸಚಿನ್ ಕ್ರಿಕೆಟ್‌ನ ಜೀನಿಯಸ್ ಎಂಬುದು ಈಗಾಗಲೇ ನಿರೂಪಿತವಾಗಿದೆ. ಶತಕದ ನೂರರಿಂದ ಅವರೇನೂ ದೊಡ್ಡವರಾಗಬೇಕಿಲ್ಲ.
- ಸಚಿನ್ ಅವರ ಕಪಾಟಿನಲ್ಲಿ ಕೊರತೆ ಇದ್ದುದು ವಿಶ್ವಕಪ್ ಪದಕ. ಅದು ಸಿಕ್ಕಾಗಲೇ –ಅಂದರೆ 2011ರಲ್ಲಿ ಭಾರತ ವಿಶ್ವಕಪ್ ಗೆದ್ದಾಗಲೇ– ಅವರು ನಿವೃತ್ತಿ ಘೋಷಿಸಿದ್ದರೆ ಭಾರಿ ಬೆಲೆ ಇರುತ್ತಿತ್ತು.
- ದೊಡ್ಡ ಯಶಸ್ಸು ಕಂಡ ಹಿರಿಯ ಆಟಗಾರ ಎಂದ ಮಾತ್ರಕ್ಕೆ ಅವರ ವೈಫಲ್ಯವನ್ನೆಲ್ಲ ಸಹಿಸಿಕೊಂಡು ತಂಡಕ್ಕೆ ಏಕೆ ಹೊರೆ ಮಾಡಿಕೊಳ್ಳಬೇಕು? ಇನ್ನೆಷ್ಟು ಕಾಲ ಅವರನ್ನು ತಂಡದಲ್ಲಿ ಇಟ್ಟುಕೊಳ್ಳಬೇಕು?
- ವಯಸ್ಸಾಗಿರುವುದನ್ನು ಒಪ್ಪಿಕೊಳ್ಳಬೇಕು. ಬ್ಯಾಟು ಕೆಳಗಿಟ್ಟು ತಮ್ಮ ಜನಪ್ರಿಯತೆಯನ್ನೇ ಬಳಸಿಕೊಂಡು ಸಮಾಜ ಸೇವಾ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಕೊಳ್ಳಬೇಕು. ಕ್ರಿಕೆಟ್ ಆಡುವುದಕ್ಕಿಂತಲೂ ಮಿಗಿಲಾದ ಕರ್ತವ್ಯ ದೇಶದಲ್ಲಿ ಅವರಿಗಾಗಿ ಕಾದಿದೆ.

